ಸಾಕ್ಷಿಯ ಹೆಸರುಃ ಪಿ ಎಲ್ ರಂಗರೆಡ್ಡಿ

ದಿನಾಂಕಃ 12–01–2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ವಾದಿಯರ ಪರ ಶ್ರೀ ಎಸ್ ಆರ್ ಆರ್ ಪರ ವಕೀಲರಿಂದಃ

ನನ್ನ ಮುತ್ತಾತ ನರಸಿಂಹರೆಡ್ಡಿಗೆ 4 ಜನ ಮಕ್ಕಳು. ಅವರ ಹೆಸರುಗಳು ಸೀಬರೆಡ್ಡಿ, ಹನುಮಯ್ಯ, ಪೆದ್ದಯ್ಯ ಮತ್ತು ಕೃಷ್ಣಾರೆಡ್ಡಿ. 2 ನೇ ಮಗ ಹನುಮಯ್ಯ ನನ್ನ ತಾತ. ನನ್ನ ತಾತನಿಗೆ ನರಸಿಂಹರೆಡ್ಡಿ ಅಂದರೆ ನನ್ನ ತಂದೆ ಒಬ್ಬನೇ ಮಗ. ನನ್ನ ತಂದೆಗೆ 3 ಜನ ಗಂಡು ಮಕ್ಕಳು. ನನ್ನ ಮುತ್ತಾತನನ್ನು ನೋಡಿಲ್ಲ. ಸೀಬರೆಡ್ಡಿ ಅವರನ್ನು ನೋಡಿಲ್ಲ. ಹನುಮಯ್ಯ, ಪೆದ್ದಯ್ಯ ಮತ್ತು ಕೃಷ್ಣಾರೆಡ್ಡಿ ರವರನ್ನು ನೋಡಿದ್ದೇನೆ. ನಾನು ಸೀಬರೆಡ್ಡಿಯನ್ನು ನೋಡದೇ ಇರುವ ಕಾರಣ ಆತ ಯಾವ ಮನೆಯಲ್ಲಿ ಮತ್ತು ಯಾವ ಜೊತೆಯಲ್ಲಿ ವಾಸ ಇದ್ದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ, ಸಾಕ್ಷಿ ನನ್ನ ತಂದೆ ಹೇಳುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಂದೆ ಸಮಕಾಲಿನವರು ನಮ್ಮ ಗ್ರಾಮದಲ್ಲಿ ಇನ್ನು ಬದುಕಿದ್ದಾರೆ. ಸೀಬರೆಡ್ಡಿಯನ್ನು ನೋಡಿದವರು ನಮ್ಮ ಗ್ರಾಮದಲ್ಲಿ ಯಾರೂ ಇಲ್ಲ. ಸೀಬರೆಡ್ಡಿ ಅನಕ್ಷರಸ್ಥರು, ಅವರಿಗೆ ಓದು ಬರಹ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ವಿದ್ಯಾವಂತರು ಎಂದು ಹೇಳುತ್ತಾರೆ. ಹನುಮಯ್ಯ, ಪೆದ್ದಯ್ಯ ಮತ್ತು ಕೃಷ್ಣಾರೆಡ್ಡಿ ಬೇರೆ ಬೇರೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಒಟ್ಟಾಗಿ ವಾಸವಾಗಿದ್ದರು ಎಂದು ಹೇಳುತ್ತಾರೆ. ಆ ಮೂವರಲ್ಲಿ ಪೆದ್ದಯ್ಯ ಯಜಮಾನಿಕೆ ಮಾಡುತ್ತಿದ್ದರು. ಆ

ಮೂವರು 1963 ರಲ್ಲಿ ಆಸ್ತಿಗಳನ್ನು ಭಾಗ ಮಾಡಿಕೊಂಡರು. ಸೀಬರೆಡ್ಡಿ 1941 ರಲ್ಲಿ ತೀರಿ ಹೋಗಿದ್ದಾರೆ.

ನಾನು 1964 ರಲ್ಲಿ ಹುಟ್ಟಿದ್ದೇನೆ. ಅವರು ಭಾಗ ಮಾಡಿಕೊಂಡ ಸಂಗತಿ ನನ್ನ ತಂದೆಯಿಂದ ನನಗೆ ತಿಳಿಯಿತು. ಆ ಸಮಯದಲ್ಲಿ ನನ್ನ ತಂದೆ ಸೀಬರೆಡ್ಡಿ ವಾರಸುದಾರರಿಗೆ ಭಾಗ ಕೊಟ್ಟ ಬಗ್ಗೆ ನನಗೆ ಹೇಳಿರಲಿಲ್ಲ. ನಾನು ತಿಳಿದುಕೊಂಡಂತೆ ಸೀಬರೆಡ್ಡಿ ವಾರಸುದಾರರಿಗೆ ಯಾವುದೇ ಆಸ್ತಿಗಳನ್ನು ಕೊಟ್ಟಿಲ್ಲ ಎಂದರೆ ಸರಿ. ಸೀಬರೆಡ್ಡಿ ಬೇರೆ ವಾಸವಾಗಿದ್ದ ಕಾರಣ ಆತನಿಗೆ ಭಾಗ ಕೊಡಿಲಿಲ್ಲ ಎಂದರೆ ಸರಿಯಲ್ಲ. ಸೀಬರೆಡ್ಡಿ ಗೆ ಚೆನ್ನಕ್ಕ ಎಂಬ ಮಗಳು ಇದ್ದಳು ಎಂದರೆ ಸರಿ. ಸದರಿ ಚೆನ್ನಕ್ಕನಿಗೆ ವಾದಿಯರು ಮಕ್ಕಳು ಎಂದರೆ ಸರಿ. ಸೀಬರೆಡ್ಡಿ ಹನುಮಯ್ಯ, ಪೆದ್ದಯ್ಯ ಮತ್ತು ಕೃಷ್ಣಾರೆಡ್ಡಿ ಒಟ್ಟಿಗೆ ಇದ್ದರು ಎಂದು ತೋರಿಸಲು ನನ್ನ ಹತ್ತಿರ ದಾಖಲಾತಿ ಇಲ್ಲ. ದಾವಾ ಸ್ವತ್ತನ್ನು ಸೀಬರೆಡ್ಡಿಗೆ ಸರ್ಕಾರದವರು ಮಂಜೂರು ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದುದ ಒಟ್ಟು ಕುಟುಂಬದಲ್ಲಿದ್ದಾಗ ಮಂಜೂರು ಮಾಡಿದ್ದರು ಎಂದು ಹೇಳುತ್ತಾರೆ. ಒಟ್ಟು ಕುಟುಂಬದ ಪರವಾಗಿ ಸೀಬರೆಡ್ಡಿಗೆ ಮಂಜೂರಾದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆ ಹೇಳುತ್ತಿದ್ದರು ಎಂದದು ಹೇಳುತ್ತಾರೆ. ಒಟ್ಟು ಕುಟುಂಬದ ಪರವಾಗಿ ಅರ್ಜಿ ಕೊಟ್ಟ ಬಗ್ಗೆ ಮತ್ತು ದಾವಾ ಸ್ವತ್ತು ಒಟ್ಟು ಕುಟುಂಬದ ಪರವಾಗಿ ಸೀಬರೆಡ್ಡಿಗೆ ಮಂಜೂರಾದ ಬಗ್ಗೆ ದಾಖಲಾತಿಗಳು ನನ್ನ ಬಳಿ ಇಲ್ಲ. ದಾವಾ ಸ್ವತ್ತು ಮಂಜೂರು ಆದ ದಿನದಿಂದ ಇವತ್ತಿನವರೆಗೆ ಖಾತೆ ಪಹಣಿ ಸೀಬರೆಡ್ಡಿ ಹೆಸರಿನಲ್ಲಿ ಇದೆ ಎಂದರೆ ಸರಿ.

ಸೀಬುರೆಡ್ಡಿ ಮಗಳು ಚಿನ್ನಕ್ಕ ನಮ್ಮ ಗ್ರಾಮದಲ್ಲಿ ಇದ್ದರು. ಅವರನ್ನು ಮದುವೆ ಮಾಡಿ ನಮ್ಮ ಊರಿನಲ್ಲಿ ಕೊಡಲಾಗಿತ್ತು. ಅವರು ಅವರ ಗಂಡ ಮತ್ತು ಮಕ್ಕಳು ಒಟ್ಟಿಗೆ ವಾಸ ಇದ್ದರು ಎಂದರೆ ಸರಿ. ಸೀಬುರೆಡ್ಡಿ ಜೀವಂತ ಇದ್ದಾಗ ಆತ ತನ್ನ ಮಗಳ ಜೊತೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸೀಬುರೆಡ್ಡಿ ಮತ್ತು ಆತನ ಅಣ್ಣ ತಮ್ಮಂದಿರು ಒಟ್ಟಿಗೆ ವಾಸವಾಗಿದ್ದರು ಎಂದು ಹೇಳುತ್ತಾರೆ. ಸೀಬುರೆಡ್ಡಿಯ ಯೋಗಕ್ಷೇಮ ಮತ್ತು ಆಗುಹೋಗುಗಳನ್ನು ಆತನ ಮಗಳು ಚಿನ್ನಕ್ಕ ನೋಡಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ. ಹನುಮಯ್ಯ, ಪೆದ್ದಯ್ಯ ಮತ್ತು ಕೃಷ್ಣಾರೆಡ್ಡಿ ಅವರ ಮಕ್ಕಳು ಮತ್ತು ಮೊಮ್ಮಕಳ ನಡುವೆ ಅವರವರ ಕುಟುಂಬದ ಸಂಬಂಧ ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಆಗಿ ಎಲ್ಲರೂ ಬೇರೆ ಬೇರೆ ವಾಸ ಇದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ಪೆದ್ದಯ್ಯ ಮತ್ತು ಕೃಷ್ಣಪ್ಪನಿಗೆ ಗಂಡು ಸಂತಾನ ಇಲ್ಲ, ಅವರಿಗೆ ಹೆಣ್ಣು ಮಕ್ಕಳು ಮಾತ್ರ ಇದ್ದಾರೆ ಹಾಗಾಗಿ ಅವರಿಬ್ಬರು ಹನುಮಯ್ಯನಿಗೆ ಒಟ್ಟು ಕುಟುಂಬದ ಸ್ವತ್ತನ್ನು ಹಕ್ಕು ಬಿಡುಗಡೆ ಪತ್ರ ಮಾಡಿ ಬಿಟ್ಟು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಸದರಿ ಹಕ್ಕು ಬಿಡುಗಡೆ ಪತ್ರ ನೊಂದಣಿ ಆಗಿದೆ . ನಮ್ಮ ಕುಟುಂಬದಲ್ಲಿ ನನ್ನ ತಾತನ ಸ್ವತ್ತುಗಳನ್ನು ನಾವು ದಿನಾಂಕ 18.06.2007 ರಂದು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಅದರ ಪ್ರಕಾರ ಖಾತೆ ಪಹಣಿ ಬಂದಿದೆ ಎಂದರೆ ಸರಿ. ಈ ಎರಡು ಪತ್ರಗಳನ್ನು ಹೊರತು ಪಡಿಸಿ ನಮ್ಮ ಮಧ್ಯೆ ಬೇರೆ ಯಾವುದೇ ಪತ್ರ ಆಗಿಲ್ಲ. ಸದರಿ ಎರಡೂ ದಾಖಲೆಗಳಲ್ಲಿ ದಾವಾ ಸ್ವತ್ತನ್ನು ಸೇರಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತು ನಮ್ಮ ಕುಟುಂಬಕ್ಕೆ ಸೇರಿಲ್ಲ ಆ ಕಾರಣದಿಂದ ದಾವಾ ಸ್ವತ್ತನ್ನು ಎರಡೂ ಪತ್ರಗಳಲ್ಲಿ

ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆ ನನ್ನ ತಾತ ಸೀಬರೆಡ್ಡಿ ಅವರ ಹೆಸರಲ್ಲಿ ಇದ್ದ ಕಾರಣ ದಾವಾ ಸ್ವತ್ತನ್ನು ಆ ಎರಡೂ ಪತ್ರ ಗಳಲ್ಲಿ ಸೇರಿಸಿಲ್ಲ ಎಂದು ಹೇಳುತ್ತಾರೆ. ಸೀಬರೆಡ್ಡಿ ನನ್ನ ಸ್ವಂತ ತಾತ ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಸೀಬರೆಡ್ಡಿ ನನ್ನ ತಾತನ ಅಣ್ಣ ಎಂದು ಹೇಳುತ್ತಾರೆ. ಸೀಬರೆಡ್ಡಿ ತೀರಿ ಹೋದ ನಂತರ ನನ್ನ ತಾತ ಹನುಮಯ್ಯ, ನನ್ನ ತಂದೆ ಮತ್ತು ನಾನಾಗಲೀ ದಾವಾ ಸ್ವತ್ತಿನ ಖಾತೆ ಪಹಣಿಯನ್ನು ಪಾವತಿ ಆಧಾರದ ಮೇಲೆ ನಮ್ಮ ಹೆಸರಿಗೆ ಮಾಡಿಕೊಳ್ಳಲು 1996 ರಲ್ಲಿ ಅರ್ಜಿ ಹಾಕಿದ್ದೆವು. ಅದರ ಪ್ರಕಾರ ಖಾತೆ ಪಹಣಿ ಆಗಲಿಲ್ಲ. ಆನಂತರ ಸೀಬರೆಡ್ಡಿ ಮಗಳು ಚೆನ್ನಕ್ಕ ಸಿವಿಲ್ ಕೊರ್ಟ್ ನಲ್ಲಿ ಅಸಲು ದಾವಾ ನಂ 34/97 ದಾವೆ ಸಲ್ಲಿಸಿದಳು. 1996 ರಲ್ಲಿ ಖಾತೆ ಪಹಣಿ ಮಾಡಿಕೊಳ್ಳಲು ನನ್ನ ತಂದ ಅರ್ಜಿ ಕೊಟ್ಟಿದ್ದರು. ಆ ರೀತಿ ಅರ್ಜಿ ಕೊಟ್ಟಿದ್ದರು ಎಂದು ತೋರಿಸಲು ನನ್ನ ಬಳಿ ದಾಖಲಾತಿ ಇಲ್ಲ.

2007 ರಲ್ಲಿನಾವು ಭಾಗ ಮಾಡಿಕೊಂಡ ಪ್ರಕಾರ ನಮ್ಮ ನಮ್ಮ ಭಾಗದ ಸ್ವತ್ತುಗಳಿಗೆ ಪ್ರತ್ಯೇಕ ಖಾತೆ ನಂಬರ್ ಮತ್ತು ಪ್ರತ್ಯೇಕ ಪಟ್ಟಾ ಪುಸ್ತಕ ಕೊಟ್ಟಿದ್ದಾರೆ ಎಂದರೆ ಸರಿ. ಅದಕ್ಕೂ ಮೊದಲು ಹನುಮಯ್ಯ, ಪೆದ್ದಯ್ಯ ಮತ್ತು ಕೃಷ್ಣಾರೆಡ್ಡಿ ಬದುಕಿದ್ದಾಗ ಕೂಡ ನಮ್ಮ ಒಟ್ಟು ಕುಟುಂಬಕ್ಕೆ ಸಂಬಂದ ಪಟ್ಟ ಸ್ವತ್ತುಗಳ ಸಂಬಂಧ ಪಟ್ಟಾ ಪುಸ್ತಕ ಇತ್ತು. ಸದರಿ ಪಟ್ಟಾ ಪುಸ್ತಕದಲ್ಲಿ ದಾವಾ ಸರ್ವೆ ನಂಬರ್ ಇರಲಿಲ್ಲ ಎಂದರೆ ಸರಿ. ನನ್ನ ತಾತ ಹನುಮಯ್ಯ, ನನ್ನ ತಂದೆ ನರಸಿಂಹರೆಡ್ಡಿ ಮತ್ತು ನಾನು ದಾವಾ ಸ್ವತ್ತಿಗೆ ಸಂಬಂಧ ಪಟ್ಟಂತೆ ಕಂದಾಯ ಕಟ್ಟಿದ್ದೇವೆ. ಆ ರೀತಿ ಕಂದಾಯ ಕಟ್ಟಿದ ಬಗ್ಗೆ ರಸೀದಿ ನನ್ನ ಬಳಿ ಇಲ್ಲ. ಕಂದಾಯ ಕಟ್ಟಿದರೆ ರಸೀದಿ ಕೊಡುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿಡಿ-19-20 ನ್ನು

ತೋರಿಸಲಾಗಿ ಆ ಎರಡನ್ನೂ 16.08.2019 ರಂದು ಈ ದಾವೆಯಲ್ಲಿ ನನ್ನ ವಿಚಾರಣೆಗೆ ಅನುಕೂಲವಾಗಲಿ ಎಂದು ತಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ನಂಬರ್ 34/97 ನ್ನು ಚಿನ್ನಕ್ಕ ಸಲ್ಲಿಸಿದ್ದಳು. ಅದರಲ್ಲಿ ನಾನು ಪಾರ್ಟಿ ಆಗಿದ್ದೆ. ಅದರಲ್ಲಿ ನನ್ನ ವಿಚಾರಣೆ ಆಗಿದೆ. ಆ ದಾವೆಯಲ್ಲಿ ನನ್ನ ವಿಚಾರಣೆಯಲ್ಲಿ ನಾನು ಸತ್ಯ ಸಂಗತಿಗಳನ್ನು ಹೇಳಿದ್ದೇನೆ. ನಾನು ಆ ದಾವೆಯಲ್ಲಿ ಡಿಡಬ್ಲ್ಯೂ 1 ಆಗಿದ್ದೆ. ಆ ದಾವೆಯ ನನ್ನ ಸಾಕ್ಷಿ ವಿಚಾರಣೆಯನ್ನು ಈ ದಾವೆಯಲ್ಲಿ ನಿಪಿ-7 ಎಂದು ಗುರುತಿಸಲಾಗಿದೆ. ಸದರಿ ನಿಪಿ-7 ರಲ್ಲಿ ಪುಟ 7 ರಲ್ಲಿ ಸರ್ವೆ ನಂ 50 ನಮಗೆ ಸೇರಿಲ್ಲದಿರುವುದರಿಂದ ಅದರಲ್ಲಿ ನನಗೆ ಹಕ್ಕು ಇರುವುದಿಲ್ಲ ಎಂದು ತಿಳಿಸಿರುತ್ತೇನೆ ಎಂದು ಸಾಕ್ಷಿ ನುಡಿದಿದ್ದೀರ ಎಂದು ಸಾಕ್ಷಿಗೆ ಸದರಿ ಪುಟ 7 ರ ಸಂಬಂಧ ಪಟ್ಟ ಸಾಲುಗಳನ್ನು ತೋರಿಸಲಾಗಿ ಸಾಕ್ಷಿ ಅನುಭವ ಇಲ್ಲದ ಕಾರಣ ತಪ್ಪಾಗಿದೆ ಎಂದು ಹೇಳುತ್ತಾರೆ. ನಿಪಿ-7 ರಂತೆ ಸಾಕ್ಷಿ ನುಡಿದಾಗ ನನಗೆ 46 ವಯಸ್ಸಾಗಿತ್ತು. ಅದು ಮೊದಲ ಕೋರ್ಟ್ ಅನುಭವ.

2007 ರಲ್ಲಿ ಸ್ವತ್ತುಗಳ ಸಂಬಂಧ ಅನುಭವ ಸ್ವಲ್ಪ ಬಂದಿತ್ತು. 2007 ರಲ್ಲಿ ಭಾಗ ಮಾಡಿಕೊಂಡಾಗ ದಾವಾ ಸ್ವತ್ತಿನ ಖಾತೆ ನನ್ನ ತಾತ ಸೀಬರೆಡ್ಡಿಯ ಹೆಸರಿನಲ್ಲಿದ್ದು ಮುಂದಿನ ದಿನಗಳಲ್ಲಿ ಖಾತೆ ಪಹಣಿ ಮಾಡಿಸಿಕೊಂಡು ಭಾಗ ಮಾಡಿಕೊಳ್ಳುತ್ತೇವೆ ಎಂದು ಒಕ್ಕಣೆ ಬರೆದಿಲ್ಲ. ಸದರಿ ಸ್ವತ್ತು ನಮ್ಮ ಕುಟುಂಬದ ಸ್ವತ್ತು ಅಲ್ಲದ ಕಾರಣ ನಾವು ದಾವಾ ಸ್ವತ್ತಿನ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ಈ ದಾವೆ ವಿಚಾರಣೆಗೆ ಬಾಕಿ ಇರುವಾಗ 2015 ರಲ್ಲಿ ನಾನು ಖಾತೆ ಪಹಣಿ ಮಾಡಿ ಕೊಡುವಂತೆ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದೆ. 2019 ರಲ್ಲಿ ನಿಡಿ-15 ರಂತೆ ಆದೇಶ ಆಯಿತು

ಎಂದರೆ ಸರಿ. ಸದರಿ ಆದೇಶ ಕೈ ತಪ್ಪಿನಿಂದ ಆಗಿದ್ದು ಅರ್ಜಿದಾರರಿಗೂ ಮತ್ತು ಸೀಬರೆಡ್ಡಿಗೂ ಸಂಬಂಧ ಇಲ್ಲ ಎಂದು ಸ್ವತಃ ತಹಸೀಲ್ದಾರ್ ಎ ಸಿ ರವರ ನ್ಯಾಯಾಲಯದಲ್ಲಿ ತಾವಾಗಿಯೇ ಅಪೀಲು ಮಾಡಿದ್ದರು ಎಂದರೆ ಸಾಕ್ಷಿ ದಾವೆ ವಿಚಾರಣೆಗೆ ಬಾಕಿ ಇರುವಾಗ ಆದೇಶವಾಗಿದೆ ಎಂಬ ಕಾರಣ ನೀಡಿ ತಹಸೀಲ್ದಾರರು ತಾವಾಗಿಯೇ ಎ ಸಿ ರವರಿಗೆ ಕಳುಹಿಸಿಕೊಟ್ಟಿದ್ದರು ಎಂದು ಹೇಳುತ್ತಾರೆ. ಎ ಸಿ ರವರ ನ್ಯಾಯಾಲಯದಲ್ಲಿ ತಹಸೀಲ್ದಾರ್ ರವರ ರದ್ದು ಪಡಿಸಿ ಆದೇಶ ಆಗಿದೆ ಎಂದು ಸಾಕ್ಷಿಗೆ ಆದೇಶದ ಪ್ರತಿ ತೋರಿಸಲಾಗಿ ಸಾಕ್ಷಿ ಆದೇಶ ಪ್ರತಿ ನೋಡಿ ನಾನು ಇದರ ವಿರುದ್ಧ ಡಿ ಸಿ ರವರ ನ್ಯಾಯಾಲಯಕ್ಕೆ ಅಪೀಲು ಮಾಡಿದ್ದೇನೆ ಎಂದು ಹೇಳಿ ಆದೇಶ ಪ್ರತಿಯನ್ನು ಗುರುತಿಸಿದ್ದು ಸದರಿ ಎ ಸಿ ರವರ ಆದೇಶ ನಂ 26/2019 –20 ನ್ನು ನಿಪಿ–14 ಎಂದು ಗುರುತಿಸಲಾಯಿತು. ಸದರಿ ಆದೇಶದ ಪ್ರಕಾರ ಸೀಬರೆಡ್ಡಿಗೆ ಹೆಸರಿಗೆ ಮ್ಯುಟೇಷನ್ ಮತ್ತು ಪಹಣಿ ಬಂದಿದ್ದು, ಪಹಣಿ ಮತ್ತು ಮ್ಯುಟೇಷನ್ ತೋರಿಸಲಾಗಿ ಸಾಕ್ಷಿ ಆ ರೀತಿ ಬಂದಿರುವುದು ನಿಜ ಎಂದು ಹೇಳಿದ್ದು ಮ್ಯುಟೇಷನನ್ನು ನಿಪಿ–15 ಎಂದು, ಪಹಣಿಯನು ನಿಪಿ–16 ಎಂದು ಗುರುತಿಸಲಾಯಿತು.

ಅಸಲು ದಾವಾ ನಂ 34/97 ವಜಾ ಆಗಿರುವ ಕಾರಣ ವಾದಿಯರಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿನ್ನಕ್ಕ ಅವಿಧ್ಯಾವಂತಳಾಗಿದ್ದು ವ್ಯವಹಾರಿಕ ಜ್ಞಾನ ಇಲ್ಲದೆ ಮತ್ತು ಅವರ ವಕೀಲರ ಕಾನೂನಿನ ತಪ್ಪು ತಿಳುವಳಿಕೆಯಿಂದ ಅಸಲು ದಾವಾ ನಂ 34/97 ನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ದಾವೆಯಲ್ಲಿ ದಾವಾ ಸ್ವತ್ತು ಚಿನ್ನಕ್ಕನಿಗೆ ಸೇರಿದ್ದು ಎಂದು ನಾನು ಹೇಳಿರುವ ಕಾರಣ ಮತ್ತು ಸೀಬರೆಡ್ಡಿ ಚಿನ್ನಕ್ಕಳ ಜೊತೆ ವಾಸ ಇದ್ದ ಕಾರಣ ಮತ್ತು

ಚೆನ್ನಕ್ಕ ಸೀಬರೆಡ್ಡಿಯ ಏಕೈಕ ಕಾನೂನಿನ ಪ್ರಕಾರ ವಾರಸುದಾರಳು ಆಗಿರುವ ಕಾರಣ ವಾದಿಯರಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಅಧಿಕಾರ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸೀಬರೆಡ್ಡಿ ಬದುಕಿರುವಾಗ ಆತನ ಸ್ವಾಧೀನದಲ್ಲಿತ್ತು, ಆತ ತೀರಿ ಹೋದ ನಂತರ ಆತನ ಮಗಳು ಚೆನ್ನಕ್ಕನ ಸ್ವಾಧೀನದಲ್ಲಿತ್ತು ಮತ್ತು ಅವಳು ತೀರಿ ಹೋದ ನಂತರ ವಾದಿಯರ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅಂದಿನಿಂದ ಇಂದಿನವರೆಗೆ ನಮ್ಮ ಸ್ವಾಧೀನದಲ್ಲಿ ಇದೆ ಎಂದು ಹೇಳುತ್ತಾರೆ. ನಾವು ಸ್ವಾಧೀನದಲ್ಲಿ ಇಲ್ಲದಿದ್ದರೂ ಈ ದಾವೆ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನಗೆ, ನನ್ನ ತಂದೆಗೆ ಮತ್ತು ನನ್ನ ತಾತನಿಗೆ ಮತ್ತು ನನ್ನ ಮುತ್ತಾತನಿಗೆ ಯಾವತ್ತೂ ಸೇರಿರಲಿಲ್ಲ ಎಂದರೆ ಸರಿಯಲ್ಲ. ನಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಅಧಿಕಾರ ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯರಿಗೆ ಹಕ್ಕು ಅಧಿಕಾರ ಸ್ವಾಧೀನತೆ ಇದೆ ಎಂದರೆ ಸರಿಯಲ್ಲ.

2015 ರಲ್ಲಿ ನಾನು ಕೊಡಿಗೇನಹಳ್ಳಿ ನಾಡ ಕಛೇರಿಯಲ್ಲಿ ಖಾತೆ ಪಹಣಿ ಮಾಡಿ ಕೊಡುವಂತೆ ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ಆ ರೀತಿ ಅರ್ಜಿ ಕೊಟ್ಟ ನಂತರ ನಾನು ವಾದಿಯರ ದಾವಾ ಸ್ವತ್ತಿನ ಸ್ವಾಧೀನತೆ ತೊಂದರೆ ಕೊಟ್ಟ ಕಾರಣ ವಾದಿಯರು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆ. ನ್ಯಾ.ನ. ಉ. ಲೇ. ಬೆ. ಮಾ.)

ಓ.ಹೇ.ಕೇ. ಸ.ಇ.

ಅಧಿಕ ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ
ಮಧುಗಿರಿ .